ಕರ್ನಾಟಕ ಸರ್ಕಾರ
(ಕಂದಾಯ ಇಲಾಖೆ)
ಉಪತಹಶೀಲ್ದಾರವರ ನ್ಯಾಯಾಲಯ ನಾಡಕಛೇರಿ ಕೊಟ್ಟೂರು

ಸಂ/ಕಂ/ಹ.ಬ./ನಾಕಕೊ/110/2015-16. ದಿನಾಂಕ:23-08-2016.

| ವಾದಿಗಳು | ಪ್ರತಿವಾದಿಗಳು |
|---|---|
| 1)ಟಿ.ಎಂ.ಸತೀಶ ತಂದೆ ಟಿ.ಮಂಜನಗೌಡ ತೂಲಹಳ್ಳಿ ಗ್ರಾಮ<br>2)ಕಳ್ಳೇರಿ ವೀರಣ್ಣ ತಂದೆ ಬೋಮ್ಮಪ್ಪ ಕೊಟ್ಟೂರು ಪಟ್ಟಣ ಕೂಡ್ಲಿಗಿ ತಾಲೂಕು | ಸುಶೀಲಮ್ಮ ಗಂಡ ಷಣ್ಮುಖಪ್ಪ ಗೊಲ್ಲರಹಳ್ಳಿ ಗ್ರಾಮ ಹೊಸಪೇಟೆ ತಾಲೂಕು |
| ಕೂಡ್ಲಿಗಿ ತಾಲೂಕು ಜೋಳದಕೂಡ್ಲಿಗಿ ಗ್ರಾಮದ ಸನಂ 9ಎ. 10ಎ. ವಿಸ್ತೀರ್ಣ 0-05. 1-84.ಎಕ್ರೆ ಜಮೀನುಗಳನ್ನು ಕ್ರಯ ಪತ್ರ ಪ್ರಕಾರ ಹಕ್ಕು ಬದಲಾವಣೆ ಮಾಡುವ ಬಗ್ಗೆ. | |

ಪ್ರಸ್ತಾವನೆ:

ಕೂಡ್ಲಿಗಿ ತಾಲೂಕು ಜೋಳದಕೂಡ್ಲಿಗಿ ಗ್ರಾಮದ ಸನಂ 9ಎ. 10ಎ. ವಿಸ್ತೀರ್ಣ 0-05. 1-84.ಎಕ್ರೆ ಜಮೀನುಗಳನ್ನು ಸದರಿ ತಾಲೂಕು ಕೊಟ್ಟೂರು ಪಟ್ಟಣದ ಕಳ್ಳೇರಿ ವೀರಣ್ಣ ತಂದೆ ಬೋಮ್ಮಪ್ಪ ಇವರಿಂದ ಸದರಿ ತಾಲೂಕು ತೂಲಹಳ್ಳಿ ಗ್ರಾಮದ ಟಿ.ಎಂ.ಸತೀಶ ತಂದೆ ಟಿ..ಮಂಜನಗೌಡ ಇವರಿಗೆ ದಿನಾಂಕ 01-02-2016 ರ ಡಾಕ್ಯುಮೆಂಟ್ ನಂಬರ್: 3567/2015-16. ರ ಪ್ರಕಾರ ಖರೀದಿಸಿ ಕೂಡ್ಲಿಗಿಯ ಉಪೊನೊಂದಣಾಧಿಕಾರಿಗಳ ಕಛೇರಿಯಲ್ಲಿ ನೊಂದಣಿ ಮಾಡಿಸಿ ಕೊಂಡಿರುತ್ತಾರೆ. ಈ ಬಗ್ಗೆ ಗ್ರಾಮಲೆಕ್ಕಿಗರು ಜೋಳದಕೂಡ್ಲಿಗಿ ಇವರು ನಮೂನೆ-21 ನೋಟಿಸನ್ನು ದಿನಾಂಕ 06-02-2016. ರಂದು ಗ್ರಾಮದಲ್ಲಿ ಪ್ರಚೂರು ಪಡಿಸಿ ಹಾಗೂ ಸಂಬಂಧಪಟ್ಟವರಿಗೆ ಜಾರಿ ಮಾಡಲಾಗಿ ಹೊಸಪೇಟೆ ತಾಲೂಕು ಗೊಲ್ಲರಹಳ್ಳಿ ಗ್ರಾಮದ ಸುಶೀಲಮ್ಮ ಗಂಡ ಷಣ್ಮುಖಪ್ಪ ಇವರು ತಕರಾರು ಅರ್ಜಿ ಸಲ್ಲಿಸಿರುವ ಕಾರಣ ಈ ಪ್ರಕರಣವನ್ನು ಎಂ.ಆರ್.ನಂಬರ್: 06/2015-16. ದಿನಾಂಕ 04-03-2016 ರಲ್ಲಿ ವಿವಾದಾಸ್ಪದ ಪ್ರಕರಣವೆಂದು ಪರಿಗಣಿಸಿ ಮುಂದಿನ ಕ್ರಮಕ್ಕೆ ಈ ಕಾರ್ಯಾಲಯಕ್ಕೆ ಕಳುಹಿಸಿ ಕೊಟ್ಟಿರುತ್ತಾರೆ.

ಈ ಪ್ರಕರಣವನ್ನು ಈ ಕಾರ್ಯಾಲಯದಲ್ಲಿ ವಿಚಾರಣೆ ಮಾಡುವ ದಿಸೆಯಲ್ಲಿ ಉಭಯ ಪಕ್ಷದವರಿಗೂ ನೋಟಿಸು ನೀಡಿ ದಿನಾಂಕ 03-05-2016 ರಿಂದ 23-08-2016 ರ ವರೆಗೆ ವಿಚಾರಣೆ ಮಾಡಲಾಯಿತು.

ವಿಚಾರಣೆ ಸಮಯದಲ್ಲಿ ಅರ್ಜಿದಾರರು ಮತ್ತು ತಕರಾರುದಾರರು ಹಾಗೂ ಅವರ ಪರ ನ್ಯಾಯಾವಾದಿಗಳು ಹಾಜರಾಗಿರುತ್ತಾರೆ. ಅರ್ಜಿದಾರರ ಪರ ನ್ಯಾಯಾವಾದಿಗಳು ಜೋಳದಕೂಡ್ಲಿಗಿ ಗ್ರಾಮದ ಸನಂ 9ಎ. 10ಎ. ವಿಸ್ತೀರ್ಣ 0-05. 1-84.ಎಕ್ರೆ ಜಮೀನುಗಳನ್ನು ಸದರಿ ತಾಲೂಕು ಕೊಟ್ಟೂರು ಪಟ್ಟಣದ ಕಳ್ಳೇರಿ ವೀರಣ್ಣ ತಂದೆ ಬೋಮ್ಮಪ್ಪ ಇವರಿಂದ ಸದರಿ ತಾಲೂಕು ತೂಲಹಳ್ಳಿ ಗ್ರಾಮದ ಟಿ.ಎಂ.ಸತೀಶ ತಂದೆ ಟ.ಮಂಜನಗೌಡ ಇವರು ದಿನಾಂಕ 01-02-2016 ರ ಡಾಕ್ಯುಮೆಂಟ್ ನಂಬರ್: 3567/2015-16. ರ ಪ್ರಕಾರ ರೂ: 1.90.000/- ಗಳಿಗೆ ಖಂಡಿತ ಕ್ರಯಕ್ಕೆ ಖರೀದಿಸಿ ಕೂಡ್ಲಿಗಿಯ ಉಪನೊಂದಣಾಧಿಕಾರಿಗಳ ಕಛೇರಿಯಲ್ಲಿ ನೊಂದಣಿ ಮಾಡಿಸಿ ಕೊಂಡಿರುತ್ತಾರೆ. ಕಾರಣ ಸದರಿ ಕ್ರಯ ಪತ್ರ ಪ್ರಕಾರ ಕ್ರಯದಾರರ ಹೆಸರಲ್ಲಿ ಹಕ್ಕು ಬದಲಾವಣೆ ಮಾಡಬೇಕೆಂದು ಕೋರಿರುತ್ತಾರೆ.

ವಿಚಾರಣೆಯಲ್ಲಿ ತಕರಾರುದಾರರು ಗೈರು ಹಾಜರಾಗಿದ್ದು ಸದರಿ ವಿವಾದಿತ ಜಮೀನುಗಳು ಕ್ರಯದಾರರ ಹೆಸರಲ್ಲಿ ಯಾವುದೇ ಕಾರಣಕ್ಕು ಹಕ್ಕು ಬದಲಾವಣೆ ಮಾಡಬಾರದೆಂದು ತಕರಾರು ಅರ್ಜಿ ಮಾತ್ರ ಸಲ್ಲಿಸಿದ್ದು ವಿಚಾರಣೆಗೆ ಗೈರು ಹಾಜರಾಗಿರುತ್ತಾರೆ.

ಮು.ತಿ.ನೋ:-2

ಮೇಲಿನ ಎಲ್ಲಾ ಅಂಶಗಳನ್ನು ಗಣನೆಗೆ ತೆಗೆದು ಕೊಂಡು ಸದರಿ ವಿವಾದಿತ ಜಮೀನುಗಳ ಕಂದಾಯ ಲೆಕ್ಕಗಳನ್ನು ಪರಿಶೀಲಿಸಿ ಅರ್ಜಿದಾರರ ಪರ ನ್ಯಾಯಾವಾದಿಗಳ ಹೇಳಿಕೆಗಳನ್ನು ಕೇಳಿ ತಕರಾರುದಾರರು ಗೈರು ಹಾಜರಾಗಿರುವುದರಿಂದ ಅವರಿಗೆ ಯಾವುದೇ ಆಸಕ್ತಿ ಇಲ್ಲದಿರುವುದು ಸಷ್ಟವಾಗಿದ್ದು ಮತ್ತು ವಿಚಾರಣೆಗೆ ಹಾಜರಾಗಿ ವಿವಾದಿತ ಜಮೀನುಗಳ ಸ್ವತ್ತಿನ ಮೇಲೆ ತಮಗಿರುವ ಹಾಗು ತಮಗೆ ಇರಬಹುದಾದ ಹಕ್ಕನ್ನು ಸಾಬೀತು ಪಡಿಸುವಲ್ಲಿ ಆಸಕ್ತಿ ವಹಿಸದಿರುವ ಕಾರಣ ವಿವಾದಿತ ಸ್ವತ್ತನ್ನು ನೊಂದಾಯಿತ ಕ್ರಯ ಪತ್ರ ಪ್ರಕಾರ ಕರ್ನಾಟಕ ಭೂಕಂದಾಯ ಕಾಯ್ದೇ 1964 ರ ಕಲಂ 128 ರ ಅಡಿಯಲ್ಲಿ ಈ ಕೆಳಗಿನಂತೆ ಆದೇಶ ಮಾಡಲಾಗಿದೆ.

## -:ಆದೇಶ:-

ಮೇಲೆ ವಿವರಿಸಿದ ಸಂದರ್ಭ ವಾಸ್ತುವಾಂಶ ಮತ್ತು ಕಾರಣಗಳಿಂದ ಕೂಡ್ಲಿಗಿ ತಾಲೂಕು ಜೋಳದಕೂಡ್ಲಿಗಿ ಗ್ರಾಮದ ಸನಂ 9ಎ. 10ಎ. ವಿಸ್ತೀರ್ಣ 0-05. 1-84.ಎಕ್ರೆ ಜಮೀನುಗಳನ್ನು ದಿನಾಂಕ 01-02-2016 ರ ಡಾಕ್ಯುಮೆಂಟ್ ನಂಬರ್:3567/2015-16. ರ ಕ್ರಯ ದಸ್ತಾವೇಜು ಪ್ರಕಾರ ಅರ್ಜಿದಾರರಾದ ಹಾಗೂ ಕ್ರಯದಾರರಾದ ಟಿ.ಎಂ.ಸತೀಶ ತಂದೆ ಟಿ.ಮಂಜನಗೌಡ ತೂಲಹಳ್ಳಿ ಗ್ರಾಮ ಇವರ ಹೆಸರಲ್ಲಿ ಹಕ್ಕು ಬದಲಾವಣೆ ಮಾಡಲು ಆದೇಶಿಸಲಾಗಿದೆ. .

ಈ ಆದೇಶವನ್ನು ಹೇಳಿ ಬರೆಯಿಸಿ ಬೆರಳಚ್ಚು ಮಾಡಿಸಿ ತಪ್ಪುಗಳನ್ನು ತಿದ್ದಿ ದಿನಾಂಕ 23-08-2016 ರಂದು ತೆರೆದ ನ್ಯಾಯಾಲಯದಲ್ಲಿ ಘೋಷಿಸಲಾಯಿತು.

ಉಪತಹಶೀಲ್ದಾರರು
ನಾಡಕಛೇರಿ ಕೊಟ್ಟೂರು
ಕೊಟ್ಟೂರು

ಇದರ ಪ್ರತಿಯನ್ನು:

1) ಅರ್ಜಿದಾರರಾದ ಟಿ.ಎಂ.ಸತೀಶ ತಂದೆ ಟಿ.ಮಂಜನಗೌಡ ತೂಲಹಳ್ಳಿ ಗ್ರಾಮ. ಕಳ್ಳೇರಿ ವೀರಣ್ಣ ತಂದೆ ಬೋಮ್ಮಪ್ಪ ಕೊಟ್ಟೂರು ಪಟ್ಟಣ ಕೂಡ್ಲಿಗಿ ತಾಲೂಕು ಇವರ ಪರ ವಕೀಲರಾದ ಟಿ.ರಮೇಶ ವಕೀಲರು ಕೂಡ್ಲಿಗಿ ಇವರ ದ್ವಾರ ಕಳುಹಿಸಿ ಕೊಡಲಾಗಿದೆ.
2) ತಕರಾರುದಾರರಾದ ಸುಶೀಲಮ್ಮ ಗಂಡ ಷಣ್ಮುಖಪ್ಪ ಗೊಲ್ಲರಹಳ್ಳಿ ಗ್ರಾಮ ಹೊಸಪೇಟೆ ತಾಲೂಕು ಇವರಿಗೆ ಕಳುಹಿಸಿ ಕೊಡಲಾಗಿದೆ.
3) ಗಣಕೀಕರಣ ವಿಭಾಗ ತಾಲೂಕು ಕಛೇರಿ ಕೂಡ್ಲಿಗಿ ಇವರ ಮುಂದಿನ ಕ್ರಮಕ್ಕಾಗಿ ಕಳುಹಿಸಿ ಕೊಡಲಾಗಿದೆ.
4) ಅಪೀಲು ಅವಧಿ 60 ದಿವಸ ಇರುತ್ತದೆ.